(ಇ) ಭೂದಾನ ಯಜ್ಞ ಸಮಿತಿಯ ಅಧೀನದಲ್ಲಿದ್ದ ಎಲ್ಲಾ ಭೂಮಿಯೂ ಈಗ ಅಂದರೆ, ದಿನಾಂಕ ೪-೯-೧೯೮೨ರಿಂದ ಸರ್ಕಾರಕ್ಕೆ ವರ್ಗಾಯಿಸಲ್ಪಟ್ಟು ಮತ್ತು ಅಧೀನದಲ್ಲಿರುವುದರಿಂದ ಇಂತಹ ಭೂಮಿಗಳನ್ನು ಕರ್ನಾಟಕ ಸರ್ಕಾರದ ಭೂ ಮಂಜೂರಾತಿ, ೧೯೬೯ರ ನಿಯಮಗಳ ಪ್ರಕಾರ ವಿಲೇವಾರಿ ಮಾಡಲಾಗುತ್ತೆ.

(ಈ) ಉಪ ಪ್ರಶ್ನೆ (ಇ)ಯ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರಾದಂಥ ಗಂಗಣ್ಣನವರ ಪರವಾಗಿ ಶ್ರೀ ಮಾನ್ ಗೋವಿಂದ ಗೌಡರು ಪ್ರಶ್ನೆಯನ್ನು ಕೇಳಬಹುದು.

ಶ್ರೀ ಎಚ್. ಜಿ. ಗೋವಿಂದಗೌಡ.—ಮಾನ್ಯ ಅಧ್ಯಕ್ಷರೇ, ಭೂದಾನ ಯಜ್ಞದ ಜಮೀನಾನ್ನು ಸರ್ಕಾರಕ್ಕೆ ಕೊಡಬೇಕೆಂದು ಇದೆ. ಆದರೆ ಇದುವರೆಗೂ ಯಾರೂ ಕೊಟ್ಟಿಲ್ಲ. ಒಂದು ವೇಳೆ ಕೊಟ್ಟಿದ್ದರೂ ಬಹಳ ಕಡಿಮೆ ಎಂದು ಹೇಳಬೇಕು. ಯಾರು ಇಂಥ ಜಮೀನುಗಳನ್ನು ಕೊಟ್ಟಿರುವುದಿಲ್ಲವೊ ಆ ಜಮೀನಿನಲ್ಲಿ ಬರುವ ಉತ್ಪತ್ತಿ ಶಾಲಾ ಕಾಲೇಜುಗಳಿಗೆ ಹೋಗಬೇಕೆಂದು ಇದೆ. ಆ ಬಗ್ಗೆ ಮಾನ ಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ೧೯೬೯ನೇ ಕಾನೂನು ಪ್ರಕಾರ ಎಲ್ಲ ಜಮೀನಾನ್ನು ಸರ್ಕಾರ ಪಕ್ಷಕ್ಕೆ ತೆಗೆದುಕೊಂಡು ನಾವು ವಿಲೇವಾರಿ ಮಾಡುತ್ತಿದ್ದೇವೆ.

ಬರಗಾಲದಿಂದಾಗಿ ಕೋಲಾರ ಜಿಲ್ಲೆಯಲ್ಲಿ ಪರಿಹಾರ ಕ್ರಮಗಳು

೪೧೬ (೨೨೨) ಶ್ರೀ ಎ. ವಿ. ಅಪ್ಪಸ್ವಾಮಿ ರೆಡ್ಡಿ (ಬಾಗೇಪಲ್ಲಿ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ೧೯೮೩-೮೪ನೆಯ ಸಾಲಿನಲ್ಲಿ ಕೋಲಾರ ಜಿಲ್ಲೆಯಲ್ಲಿ ಮತ್ತು ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಕ್ಷಾಮ ಪರಿಹಾರ ಕಾರ್ಯಗಳಿಗಾಗಿ ಸರ್ಕಾರದವರು ಎಷ್ಟು ಹಣ ವೆಚ್ಚ ಮಾಡಿದ್ದಾರೆ ?

ಆ) ಈಗಾಗಲೇ ಕಾವಾಗಾರಿ ನಡೆದು ಹಣ ಬಿಡುಗಡೆಯಾಗದಿರುವುದರಿಂದ ಆಳುಗಳಿಗೆ ಹಣ ಪಾವತಿಯಾಗದಿರುವ ಸಂದರ್ಭಗಳೆಷ್ಟು ಮತ್ತು ಅವರಿಗೆ ಪಾವತಿಯಾಗದಿರುವ ಒಟ್ಟು ಹಣ ಎಷ್ಟು ?

ಇ) ಬಾಗೇಪಲ್ಲಿ ಗುಡಿಬಂಡೆ ತಾಲ್ಲೂಕುಗಳಲ್ಲಿ ಕ್ಷಾಮ ಪರಿಸ್ಥಿತಿ ಇನ್ನೂ ಮುಂದುವರೆದಿರುವುದು ಹಾಗೂ ಅನೇಕ ಕೆಲಸಗಾರರಿಗೆ ಕೆಲಸದ ಅಭಾವವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಕೆಲಸಗಾರರಿಗೆ ಕೂಲಿಯ ಅಭಾವ ಮುಂದುವರಿಯುವುದರಿಂದಲೂ ಅವರಲ್ಲಿ ಆಹಾರದ ತೀವ್ರ ಕೊರತೆ ಇರುವುದರಿಂದಲೂ ಸರ್ಕಾರದವರು ಕ್ಷಾಮ ಪರಿಹಾರ ಕಾರ್ಯಗಳನ್ನೂ ಮುಂದುವರಿಸುವ ಭರವಸೆಯನ್ನು ಕೊಡುವರೆ ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ೧೯೮೩-೮೪ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯಲ್ಲಿ ಅಭಾವ ಪರಿಹಾರಕ್ಕಾಗಿ ರೂ. ೨೨೪-೩೭ ಲಕ್ಷಗಳನ್ನು ವಿವಿಧ ಇಲಾಖೆಗಳಿಂದ ಖರ್ಚು ಮಾಡಲಾಗಿದೆ. ಅದರ ಪೈಕಿ ಅಭಾವ ಪರಿಹಾರ ಕಾವಾಗಾರಿಗಳಿಗಾಗಿ ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಜಿಲ್ಲಾಧಿಕಾರಿಯೊಬ್ಬರೆ ಇಲಾಖೆ ರೂ. ೧೯, ೧೪, ೮೦೨-೦೦ಗಳನ್ನು ಖರ್ಚು ಮಾಡಲಾಗಿದೆ. ಇದಲ್ಲದೆ ಇತರ ಇಲಾಖೆಗಳಾದ ಪಿ. ಹೆಚ್. ಇ., ಅರ್ಬನ್ ವಾಟರ್ ಸಪ್ಲೈ, ಮಹಿಳಾ ಕಲ್ಯಾಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಯೋಜನೆ ಇಲಾಖೆಯವರು ಕೂಡ ಬಾಗೇಪಲ್ಲಿಯಲ್ಲಿ ಖರ್ಚು ಮಾಡಿದೆ. ವಿವರಗಳನ್ನು ಸಂಗ್ರಹಿಸಲಾಗುತ್ತಿದೆ.

ಆ) ಪಾವತಿಯಾಗದೆ ಇರುವ ಹಣವನ್ನು ಕೆಲಸಕ್ಕೆ ಹಾಜರಾಗಿದ್ದಂತ ಕೃಷಿ ಕಾರ್ಮಿಕರಿಗೆ ಕೂಡಲೇ ಪಾವತಿ ಮಾಡಲು ಹಣವನ್ನು ಬಿಡುಗಡೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಕ್ಷಣ ಪಾವತಿ ಮಾಡುವಂತೆ ಸೂಚನೆ ನೀಡಲಾಗಿದೆ.

ಇ) ಈ ವರ್ಷದ ಆಗಸ್ಟ್ ಎರಡನೇ ವಾರದಲ್ಲಿ ಒಳ್ಳೆಯ ಮಳೆ ಬಿದ್ದಿರುವುದರ ಸಲುವಾಗಿ ಎಲ್ಲಾ ವ್ಯವಸಾಯ ಕಾರ್ಮಿಕರು ಕೃಷಿ ಕಾರ್ಯಗಳಲ್ಲಿ ನಿರತರಾಗಿದ್ದು, ಬಿತ್ತನೆ ಕೆಲಸ ಮುಗಿದಿರು

ತ್ತದೆ. ವ್ಯವಸಾಯ ಕಾರ್ಮಿಕರಿಗೆ ಪರಿಹಾರ ಕಾರ್ಯಗಳು ಅವಶ್ಯಕವಾದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಲ್ಲಿ ಮತ್ತು ಇಲಾಖಾ ಕಾಮಗಾರಿಗಳಲ್ಲಿ ಕೆಲಸವನ್ನು ಒದಗಿಸಲಾಗುವುದು.

ಈ) ಕೃಷಿ ಕಾರ್ಮಿಕರು ಕೃಷಿ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಒಂದು ವೇಳೆ ಕೆಲಸದ ಅವಶ್ಯಕತೆ ಕಂಡು ಬಂದಲ್ಲಿ ಸಮಸ್ಯೆಯನ್ನು ಪರಿಹರಿಸಲು ಗ್ರಾಮೀಣ ಉದ್ಯೋಗದಡಿಯಲ್ಲಿ ಮತ್ತು ಇಲಾಖೆ ಕಾಮಗಾರಿಗಳ ಅಡಿಯಲ್ಲಿ ಕೆಲಸಗಳನ್ನು ತೆಗೆದುಕೊಳ್ಳಲಾಗುವುದು.

ಬಿ. ಡಿ. ಎ.ಯಂ ಬಗ್ಗೆ ಶ್ವೇತ ಪತ್ರ

೪೧೭ (೨೨೫) ಶ್ರೀ ಎಸ್. ಸೂರ್ಯನಾರಾಯಣ ರಾವ್ (ಪತ್ತೂರು).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ೭ನೇ ವಿಧಾನ ಸಭೆಯ ಮೊದಲನೆಯ ಅಧಿವೇಶನದಲ್ಲಿ ಬಿ. ಡಿ. ಎ. ಬಗ್ಗೆ ಒಂದು ಶ್ವೇತ ಪತ್ರವನ್ನು ಪ್ರಕಟಿಸುತ್ತೇವೆಂದು ಸರ್ಕಾರದವರು ಭರವಸೆ ಕೊಟ್ಟಿದುದು ನಿಜವೇ ?

ಆ) ಹಾಗಿದ್ದಲ್ಲಿ ಈ ಭರವಸೆ ಕಾರ್ಯಗತವಾಗದಿರಲು ಕಾರಣಗಳೇನು ?

ಇ) ಈ ಶ್ವೇತ ಪತ್ರವನ್ನು ಯಾವಾಗ ಪ್ರಕಟಿಸಲಾಗುವುದು?

ಶ್ರೀ ಎಂ. ಚಂದ್ರಶೇಖರ್ (ನಗರಾಡಳಿತ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಚಿವರು).—

ಅ) ಹೌದು.

ಆ) ವಿಷಯ ಸಂಗ್ರಹಣೆಗೆ ಕಾಲಾವಕಾಶ ಬೇಕಾಗಿರುವುದರಿಂದ ಇದು ವಿಳಂಬವಾಗಿದೆ.

ಇ) ಶ್ವೇತ ಪತ್ರವನ್ನು ಸಿದ್ಧಪಡಿಸಲಾಗುತ್ತಿದೆ. ಶ್ವೇತ ಪತ್ರವು ಸಿದ್ಧವಾದ ಕೂಡಲೇ ಇದನ್ನು ಪ್ರಕಟಿಸಲಾಗುವುದು.

(ಮಾನ್ಯ ಸದಸ್ಯರು ಹಾಜರಿರಲಿಲ್ಲ.)

ಸಂಳ್ಯ ಕ್ಷೇತ್ರದಲ್ಲಿರುವ ವಿದ್ಯುಚ್ಛಕ್ತಿಯ ಬಗ್ಗೆ

೪೧೮ (೧೪೦) ಶ್ರೀ ಬಾಕೀಲ ಹುಕ್ಕರಪ್ಪ.—ಮಾನ್ಯ ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಸುಳ್ಯ ಕ್ಷೇತ್ರದ ಶಾಣಾಯಾರು, ಮತಿರಳು, ಎಡಮಂಗಲ, ಚಾರ್ವಕ ಮೊದಲಾದ ಕಡೆಗಳಿಗೆ ವಿದ್ಯುಚ್ಛಕ್ತಿಯ ಸಲಕರಣೆಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಾದರೆ ವಿದ್ಯುತ್ ಸಲಕರಣೆಗಳನ್ನು ಸುಳ್ಯ ವಿದ್ಯುತ್ ಕೇಂದ್ರಕ್ಕೆ ಯಾವಾಗ ಒದಗಿಸಿಕೊಡಲಾಗುವುದು ?

ಶ್ರೀ ಜೆ. ಎಚ್. ಪಟೇಲ್ (ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಸಚಿವರು).—

(ಅ) ಈ ಸ್ಥಳಗಳಲ್ಲಿ ವಿದ್ಯುಚ್ಛಕ್ತಿ ಒದಗಿಸಲು ಬೇಕಾದ ಸಲಕರಣೆಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

(ಆ) ಬೇಕಾಗುವ ಸಲಕರಣೆಗಳನ್ನು ಆದ್ಯತೆ ಮೇರೆಗೆ ೧೯೮೩–೮೪ರಲ್ಲಿ ಒದಗಿಸಲಾಗುವುದು.

ಶ್ರೀ ಬಾಕೀಲ ಹುಕ್ರಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಆಧ್ಯತೆಯ ಮೇಲೆ ಒದಗಿಸಲಾಗುತ್ತದೆಂದು ಹೇಳಿದ್ದಾರೆ. ಆಧ್ಯತೆ ಎಂದರೆ ಯಾವಾಗ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ ೩೧–೩–೧೯೮೪ರ ಒಳಗಾಗಿ ಮಾಡುತ್ತೇವೆ.